# ಥೈರಾಯ್ಡ್ ಸಮಸ್ಯೆಗೆ ಆಯುರ್ವೇದ ಚಿಕಿತ್ಸೆ

ಮಧುಮೇಹ, ರಕ್ತದ ಒತ್ತಡ, ಮಾನಸಿಕ ಒತ್ತಡ ಮುಂತಾದವು ಇಂದು ಬಹಳಷ್ಟು ಜನರನ್ನು ಕಾಡುತ್ತಿದೆ. ಇವುಗಳ ಜತೆಗೆ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಿರುವ ಥೈರಾಯ್ಡ್ ಸಮಸ್ಯೆ ಜನರನ್ನು ನೆಮ್ಮದಿಯಾಗಿರಲು ಬಿಡುತ್ತಿಲ್ಲ.

ಮಧ್ಯ ವಯಸ್ಕರಲ್ಲಿ ಅದರಲ್ಲೂ ಹೆಚ್ಚಾಗಿ ಮಹಿಳೆಯರಲ್ಲಿ ಈ ಥೈರಾಯ್ಡ್ ಸಮಸ್ಯೆ ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿದೆ.

ಥೈರಾಯ್ಡ್ ಒಂದು ಚಿಟ್ಟೆಯಾಕಾರದ, ಸುಮಾರು 20-25 ಗ್ರಾಂ ತೂಕವಿರುವ 5-2-2 ಸೆಂ.ಮೀ ಅಳತೆಯ,ಗಂಟಲಿನ ಮುಂಭಾಗದಲ್ಲಿರುವ ಒಂದು ಗ್ರಂಥಿ. ಈ ಗ್ರಂಥಿಯ ಎಲ್ಲಾ ಕಾರ್ಯ ಚಟುವಟಿಕೆಗಳ ಕೇಂದ್ರ ಬಿಂದು. ರಾಜ ಗ್ರಂಥಿ ಎಂದು ಕರೆಯಲ್ಪಡುವ ಮೆದುಳಿನಲ್ಲಿರುವ ಪಿಟ್ಯುಟರಿ ಗ್ರಂಥಿಯ ಹತೋಟಿಯಲ್ಲಿರುತ್ತದೆ. ಈ ಪಿಟ್ಯುಟರಿ ಗ್ರಂಥಿ ಸ್ರವಿಸುವ ಒಂದು ಹಾರ್ಮೋನ್ ಟಿ.ಎಸ್.ಎಚ್. ಇದು ಥೈರಾಯ್ಡ್ ಗ್ರಂಥಿಯ ಕಾರ್ಯವನ್ನು ನಿಯಂತ್ರಿಸುತ್ತದೆ. ಅನೇಕ ಜೈವಿಕ ಕ್ರಿಯೆಗಳು ತಮ್ಮ ಪರಿಧಿಯಲ್ಲಿ ನಡೆಯಲು ಸಹಾಯ ಮಾಡುತ್ತವೆ.

ಯಾವುದೇ ಕಾರಣಕ್ಕೂ ಥೈರಾಯ್ಡ್ ತನ್ನ ಕಾರ್ಯದಲ್ಲಿ ವ್ಯತ್ಯಾಸ ಮಾಡಿದಾಗ ಅನೇಕ ರೋಗ ಲಕ್ಷಣಗಳು ಪ್ರಕಟಗೊಳ್ಳುತ್ತವೆ.

ಥೈರಾಯ್ಡ್ ಸಮಸ್ಯೆಯನ್ನು ಆಯುರ್ವೇದದಲ್ಲಿ ಗಲಗಂಡ ಎಂದು ಕರೆಯಲಾಗಿದೆ. ಸುಶ್ರುತ ಸಂಹಿತೆಯಲ್ಲಿ ಇದರ ವಿವರಣೆ ಮತ್ತು ಸಂಪೂರ್ಣ ಚಿಕಿತ್ಸೆ ವಿವರಿಸಲಾಗಿದೆ.

ಥೈರಾಯ್ಡ್ ವಿಧಗಳು-

ಥೈರಾಯ್ಡ್ ತನ್ನ ಕಾರ್ಯದಲ್ಲಿಯ ವ್ಯತ್ಯಾಸವನ್ನು 2 ವಿಧವಾಗಿ ವಿಂಗಡಿಸಬಹುದು.

1 ಹೈಪರ್ ಥೈರಾಯ್ಡಿಸಂ (ಥೈರಾಯ್ಡ್ ಹಾರ್ಮೋನ್‌ಗಳ ಸ್ರಾವ ಹೆಚ್ಚಾಗುವುದು)

2 ಹೈಪೊ ಥೈರಾಯ್ಡಿಸಂ (ಥೈರಾಯ್ಡ್ ಹಾರ್ಮೋನ್‌ಗಳ ಸ್ರಾವ ಕಡಿಮೆಯಾಗುವುದು.)

ಸಾಮಾನ್ಯವಾಗಿ ಇದನ್ನು ಪ್ರಯೋಗಾಲಯ ಪರೀಕ್ಷೆಗಳ ಮೂಲಕ ತಿಳಿಯಬಹುದು.

ಆಯುರ್ವೇದದಲ್ಲಿ ವಾತಜ, ಕಫಜ, ಮೇದಜ ಎಂದು 3 ವಿಧಗಳಿವೆ.

ಲಕ್ಷಣಗಳು-

ಹೈಪರ ಥೈರಾಯ್ಡಿಸಂ ನ ಮುಖ್ಯ ಲಕ್ಷಣಗಳು- ಇದನ್ನು ವಾತಜ ಗಲಗಂಡಕ್ಕೆ ಹೋಲಿಸಬಹುದು.

1 ಹೃದಯ ಬಡಿತದಲ್ಲಿ ಹೆಚ್ಚಳ
2 ಆಯಾಸ
3 ದೇಹದ ತೂಕದಲ್ಲಿ ಇಳಿತ
4 ನಿದ್ರಾಹೀನತೆ
5 ಮಾನಸಿಕ ಕ್ಷೋಭೆ
6 ಭಯ
7 ಅನೇಕ ಭಾರಿ ಮಲ ಪ್ರವೃತ್ತಿ
8 ಸ್ತ್ರಿಯರಲ್ಲಿ ಋತುಚಕ್ರ ಸಂಭಂಧಿ ತೊಂದರೆಗಳು
9 ಕೂದಲು ಉದುರುವುದು
10 ಮಾಂಸಖಂಡಲ್ಲಿ ದೌರ್ಬಲ್ಯ ಮುಂತಾದವುಗಳು

ಹೈಪೊಥೈರಾಯ್ಡಿಸಂ ನ ಮುಖ್ಯ ಲಕ್ಷಣಗಳು. ಇದನ್ನು ಆಯುರ್ವೇದದಲ್ಲಿ ಕಫಜ ಮತ್ತು ಮೇದಜ ಗಲಗಂಡಕ್ಕೆ ಹೋಲಿಸಬಹುದು.

1 ಸಂಧಿ ಶೂಲ
2 ಮಲಬದ್ಧತೆ
3 ಹಸಿವೆ ಇಲ್ಲದಿರುವುದು
4 ನೆನಪಿನ ಶಕ್ತಿ ಕುಂದುವುದು
5 ದೇಹದ ತೂಕದಲ್ಲಿ ಹೆಚ್ಚಳ
6 ಒಣ ಚರ್ಮ
7 ಅತಿ ನಿದ್ರೆ
8 ಋತುಚಕ್ರ ಏರುಪೇರು
9. ಆಯಾಸ



ಮಧ್ಯ ವಯಸ್ಕರಲ್ಲಿ ಅದರಲ್ಲೂ ಹೆಚ್ಚಾಗಿ ಮಹಿಳೆಯರಲ್ಲಿ ಈ ಥೈರಾಯ್ಡ್ ಸಮಸ್ಯೆ ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿದೆ. ಇದಕ್ಕೆ ಆಯುರ್ವೇದದಲ್ಲಿ ಉತ್ತಮ ಚಿಕಿತ್ಸೆಯಿದೆ.

■ ಡಾ. ವೀಣಾ ಅರ್ಹಂತ್

**ಆಯುರ್ವೇದ ಚಿಕಿತ್ಸೆ**

ಆಯುರ್ವೇದದಲ್ಲಿ ಥೈರಾಯ್ಡ್ ಸಮಸ್ಯೆಗೆ ತುಂಬಾ ಪರಿಣಾಮಕಾರಿಯಾದ ಚಿಕಿತ್ಸೆಯನ್ನು ಹೇಳಲಾಗಿದೆ.ರೋಗಿಯ ಬಲಾಬಲ, ಲಕ್ಷಣಗಳು, ಪ್ರಕೃತಿಯನ್ನು, ರೋಗನಿದಾನವನ್ನು ಪರಿಗಣಿಸಿ ಚಿಕಿತ್ಸೆಯನ್ನು ಕೊಡಲಾಗುತ್ತದೆ.

ಚಿಕಿತ್ಸೆಯಲ್ಲಿ ಮುಖ್ಯವಾಗಿ

1. ಲೇಪ

2. ನಸ್ಯ- ಔಷಧಿಯುಕ್ತ ಸ್ವರಸ ಅಥವಾ ಚೂರ್ಣವನ್ನು ನಾಸಾ ಮಾರ್ಗದ ಮೂಲಕ ಹಾಕುವಂತಹ ಚಿಕಿತ್ಸೆ ಇದಾಗಿದ್ದು ತುಂಬಾ ಪರಿಣಾಮಕಾರಿಯಾಗಿದೆ.

3. ಆಂತರಿಕವಾಗಿ ಕೊಡುವ ಔಷಧಿಗಳು- ಕಾಂಚನಾರ ಗುಗ್ಗುಳು, ವರುಣಾದಿ ಕಷಾಯ ಮುಂತಾದವುಗಳನ್ನು ಆಯುರ್ವೇದ ವೈದ್ಯರ ಸಲಹೆಯ ಮೇರೆಗೆ ತೆಗೆದುಕೊಳ್ಳುವುದು.

ಈ ಎಲ್ಲ ಔಷಧಿಗಳನ್ನು ರೋಗಿಯು ಯಾವ ಕಾಲದಲ್ಲಿ ಬೇಕಾದರೂ, ಅಂದರೆ ಹೊಸದಾಗಿ ಥೈರಾಯ್ಡ್ ಬಂದಾಗ ಅಥವಾ ಈಗಾಗಲೇ ಬೇರೆ ಚಿಕಿತ್ಸಾ ಪದ್ಧತಿಯಲ್ಲಿ ಔಷಧಿ ಪ್ರಾರಂಭವಾಗಿದ್ದರೂ ಸಹ ತೆಗೆದುಕೊಳ್ಳಬಹುದು. ಇಲ್ಲಿ ಚಿಕಿತ್ಸಾ ಕಾಲ ಮಾತ್ರ ಹೆಚ್ಚುತ್ತದೆಯೆ ವಿನಹ ಮತ್ತೆ ಯಾವುದರಲ್ಲೂ ವ್ಯತ್ಯಾಸವಾಗುವುದಿಲ್ಲ.

ಕ್ರಮೇಣ ಔಷಧಿಯ ಪ್ರಮಾಣವನ್ನು ಕಡಿಮೆ ಮಾಡುತ್ತಾ ಬರಲಾಗುವುದು. ರೋಗಿಯ ಮಾನಸಿಕ ನೆಮ್ಮದಿಗಾಗಿ ಪ್ರತಿ ಬಾರಿ ಪ್ರಯೋಗಾಲದ ಪರಿಕ್ಷೆ ಮಾಡಿಸುವುದು ಸೂಕ್ತ. ಆಯುರ್ವೇದ ಔಷಧಿಗಳನ್ನು ತೆಗೆದುಕೊಂಡ ಅನೇಕ ಥೈರಾಯ್ಡ್ ರೋಗಿಗಳು ಇದರಿಂದ ಗುಣಮುಖರಾಗಿರುವುದನ್ನು ಪರೀಕ್ಷೆಗಳು ದೃಢಪಡಿಸಿವೆ. ಈ ಚಿಕಿತ್ಸೆಯಿಂದ ಯಾವುದೇ ಅಡ್ಡ ಪರಿಣಾಮಗಳಿರುವುದಿಲ್ಲ.

ವೈದ್ಯರ ಮೊಬೈಲ್: 9916491041